## ತುಮಕೂರಿನಲ್ಲಿ ಯುವಜನ ಸೇವಾ ನಿಲಯ

೧೪೫೯ (೨೨೬೮) ಶ್ರೀ ಶಫಿ ಅಹಮದ್ (ತುಮಕೂರು):- ಮಾನ್ಯ ಯುವಜನ ಸೇವಾ, ಕ್ರೀಡಾ, ಮತ್ತು ಕನ್ನಡ ಹಾಗೂ ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ತುಮಕೂರಿನಲ್ಲಿ ಯುವಜನ ಸೇವಾ ನಿಲಯ ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ, ಯಾವ ದಿನಾಂಕದಿಂದ ಪ್ರಾರಂಭಿಸಲಾಗುವುದು?

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರೀಡಾ ಮತ್ತು ಕನ್ನಡ ಹಾಗೂ ಸಂಸ್ಕೃತಿ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

## ಚಿಕ್ಕಮಗಳೂರು ಜಿಲ್ಲೆಗೆ ಸಣ್ಣ ನೀರಾವರಿ ಇಲಾಖೆಯಿಂದ ೧೯೯೧-೯೨ ಸಾಲಿನಲ್ಲಿ ಕಾಮಗಾರಿಗೆ ಮಂಜೂರಾದ ಹಣ

೧೪೬೦ (೧೦೧೩) ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಚಿಕ್ಕಮಗಳೂರು ಜಿಲ್ಲೆಗೆ ಸಣ್ಣ ನೀರಾವರಿ ಇಲಾಖೆಯಿಂದ ೧೯೯೧-೯೨ನೇ ಸಾಲಿಗೆ ಎಷ್ಟು ಕಾಮಗಾರಿಗಳು ಮಂಜೂರಾಗಿವೆ? (ತಾಲ್ಲೂಕುವಾರು ವಿವರಣೆ ಕೊಡುವುದು)

ಆ) ಈ ಕಾಮಗಾರಿಗಳ ಅಂದಾಜು ವೆಚ್ಚ ಎಷ್ಟು?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ೧೯೯೧-೯೨ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಂಜೂರಾದ ಕಾಮಗಾರಿಗಳು.

| ಕ್ರಮ ಸಂಖ್ಯೆ | ತಾಲ್ಲೂಕು | ಸಣ್ಣ ನೀರಾವರಿ ವಿಭಾಗ ಕಾಮಗಾರಿಗಳು | ಕಾವೇರಿ ಜಲಾನಯನ ಪತ ನೀರಾವರಿ ನಿಗಮ ಕಾಮಗಾರಿಗಳು | ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗದ ಕಾಮಗಾರಿಗಳು |
|---|---|---|---|---|
| ೧. | ಚಿಕ್ಕಮಗಳೂರು | ೧೩ | ೧ | ೧೭ |
| ೨. | ಕಡೂರು | ೨೨ | ೬ | ೧೨ |
| ೩. | ಮೂಡಿಗೆರೆ | — | — | ೧೮ |
| ೪. | ಕೊಪ್ಪ | — | — | ೨೫ |
| ೫. | ನರಸಿಂಹರಾಜಪುರ | — | — | ೧೪ |